# ಮೇಲ್ವಿಚಾರಕ ಹುದ್ದೆಗಳ (KSRTC) ನೇಮಕಾತಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ -2009

**ಸಮಯ : 3.00 ಗಂಟೆ** **ಅಂಕಗಳು:120**

1. ರಾಹುಲನು ಆಂಗ್ಲಭಾಷೆಯಲ್ಲಿ 85% ರಾಸಾಯನಶಾಸ್ತ್ರದಲ್ಲಿ 91%, ಜೀವಶಾಸ್ತ್ರದಲ್ಲಿ 90% ಮತ್ತು ಸಮಾಜಶಾಸ್ತ್ರದಲ್ಲಿ 84% ಅಂಕಗಳನ್ನು ಗಳಿಸಿದ್ದಾನೆ. ಅವನು ಒಟ್ಟು ಮೊತ್ತ 90% ಅಂಕಗಳನ್ನು ಗಳಿಸಿದರೆ ಗಣಕಯಂತ್ರವನ್ನು ತೆಗಿಸಿಕೊಡುವುದಾಗಿ ಅವನ ತಂದೆಯು ಭಾಷೆ ಕೊಟ್ಟಿದ್ದಾರೆ. ಕಡೆಯ ಪರೀಕ್ಷೆಯಾದ ಗಣಿತಶಾಸ್ತ್ರದಲ್ಲಿ ರಾಹುಲನು ಎಷ್ಟು ಅಂಕಗಳನ್ನು ಗಳಿಸಿದರೆ ಈ ಬಹುಮಾನವನ್ನು ಗೆಲ್ಲಬಹುದು?
   ಎ) 98
   ಬಿ) 99
   ಸಿ) 100
   ಡಿ) ಬಹುಮಾನವನ್ನು ಗೆಲ್ಲಲಾಗುವುದಿಲ್ಲ
2. ನೀವು ವಿಜಯನಗರ ಸಾಮ್ರಾಜ್ಯದಲ್ಲಿ ಪಂಪ ಅಥವಾ ವಿರೂಪಾಕ್ಷಪುರದಲ್ಲಿ ನೆಲೆಸಿದ್ದರೆ, ಈಗಿನ ಯಾವ ನಗರದಲ್ಲಿ ನೆಲೆಸಿದ್ದಿರಿ?
   ಎ) ಮುರುಡೇಶ್ವರ ಬಿ) ಹಂಪೆ
   ಸಿ) ಪಡುಬಿದ್ರಿ ಡಿ) ಹಳೇಬೀಡು
3. ಕರ್ನಾಟಕಕ್ಕೆ ದಲೈಲಾಮಾ ಬಂದರೆ, ಅವರು ಖಂಡಿತ ಭೇಟಿಕೊಡಬಹುದಾದ ಜಿಲ್ಲೆ ಯಾವುದೆಂದರೆ
   ಎ) ಮೈಸೂರು ಬಿ) ಹಾಸನ
   ಸಿ) ಉಡುಪಿ ಡಿ) ಕೊಡಗು
4. ಐಹೊಳೆ : ಬಾಗಲಕೋಟೆ : ಬಾದಾಮಿ: ................
   ಎ) ಬೆಳಗಾವಿ ಬಿ) ಬಾಗಲಕೋಟೆ
   ಸಿ) ಬಳ್ಳಾರಿ ಡಿ) ಬೀದರ್
5. ಯಾವುದು ಗುಂಪಿಗೆ ಸೇರುವುದಿಲ್ಲ?
   ಎ) ಹೈಡ್ರೋಕ್ಲೋರಿಕ್ ಆಮ್ಲ
   ಬಿ) ಸಲ್ಫ್ಯೂರಿಕ್ ಆಮ್ಲ
   ಸಿ) ಸಿಟ್ರಿಕ್ ಆಮ್ಲ
   ಡಿ) ನೈಟ್ರಿಕ್ ಆಮ್ಲ
6. ಉಮೇಶನು ಒಂದೇ ದಿಕ್ಕಿನಲ್ಲಿ 7 ಕಿ.ಮೀ ದೂರವನ್ನು ಗತಿಸುತ್ತಾನೆ. ನಂತರ ಬಲಕ್ಕೆ ತಿರುಗಿ 3 ಕಿ.ಮೀ ದೂರವನ್ನು ಗತಿಸುತ್ತಾನೆ. ಅವನು ಪುನಃ ಬಲಕ್ಕೆ ತಿರುಗಿ 7 ಕಿ.ಮೀ ದೂರ ನಡೆದರೆ, ಮೊದಲು ಹೊರಟ ಸ್ಥಳದಿಂದ ಎಷ್ಟು ದೂರದಲ್ಲಿದ್ದಾನೆ?
   ಎ) 10 ಕಿ.ಮೀ ಬಿ) 03 ಕಿ.ಮೀ
   ಸಿ) 20 ಕಿ.ಮೀ ಡಿ) 07 ಕಿ.ಮೀ
7. ಒಂದು ದಿನ ಬೆಳ್ಳಿಗ್ಗೆ ಸೂರ್ಯೋದಯದ ನಂತರ ರಾಮ ಮತ್ತು ಭೀಮರು ಪರಸ್ಪರ ಬೆನ್ನು ಹಾಕಿಕೊಂಡು ನಿಂತಿದ್ದರು. ರಾಮನ ನೆರಳು ಎಡಭಾಗದಲ್ಲಿ ಬಿದ್ದಿತ್ತು. ಹಾಗಾದರೆ ಭೀಮನ ಮುಖ ಯಾವ ದಿಕ್ಕಿಗಿರುತ್ತದೆ?
   ಎ) ಪೂರ್ವ ಬಿ) ಪಶ್ಚಿಮ
   ಸಿ) ಉತ್ತರ ಡಿ) ದಕ್ಷಿಣ
8. ರಾಮನು ಒಂದು ಕೆಲಸವನ್ನು 80 ದಿನಗಳಲ್ಲಿ ಮುಗಿಸುವನು, ಭೀಮನು ಒಬ್ಬನೇ 48 ದಿನಗಳಲ್ಲಿ ಮುಗಿಸುವನು. ಇಬ್ಬರೂ ಸೇರಿ ಎಷ್ಟು ದಿನಗಳಲ್ಲಿ ಅದೇ ಕೆಲಸವನ್ನು ಮುಗಿಸುವರು?
   ಎ) 25 ದಿನಗಳು ಬಿ) 24 ದಿನಗಳು
   ಸಿ) 30 ದಿನಗಳು ಡಿ) 35 ದಿನಗಳು
9. ಒಂದು ವಿಮಾನವು 32,000 ಅಡಿಗಳಷ್ಟು ಎತ್ತರದಿಂದ, ನಿಮಿಷಕ್ಕೆ 1200 ಅಡಿಗಳಷ್ಟು ಪ್ರಮಾಣದಲ್ಲಿ ಕೆಳಗಿಳಿಯಲು ಪ್ರಾರಂಭಿಸಿದೆ. 12 ನಿಮಿಷಗಳ ನಂತರ, ವಿಮಾನವು ಎಷ್ಟು ಎತ್ತರದಲ್ಲಿ ಹಾರುತ್ತಿರುತ್ತದೆ?
   ಎ) 14,400 ಅಡಿಗಳು ಬಿ) 16,800 ಅಡಿಗಳು
   ಸಿ) 17,600 ಅಡಿಗಳು ಡಿ) 17,800 ಅಡಿಗಳು
10. 55 ಮೀ/ ಸೆಕೆಂಡಿನ ವೇಗವು ಇದರಲ್ಲಿ ಯಾವುದಕ್ಕೆ ಸಮ?
   ಎ) 11 ಕಿ.ಮೀ/ಗಂಟೆಗೆ
   ಬಿ) 13.5 ಕಿ.ಮೀ/ ಗಂಟೆಗೆ
   ಸಿ) 198 ಕಿ.ಮೀ/ ಗಂಟೆಗೆ
   ಡಿ) 275 ಕಿ.ಮೀ/ ಗಂಟೆಗೆ

11. ಬೆಂಗಳೂರಿಗೆ ಶೇಕಡ 20ರಷ್ಟು ನೀರಿನ ಸರಬರಾಜನ್ನು ಯಾವ ನದಿಯು ಒದಗಿಸುತ್ತದೆ?

ಎ) ಅರ್ಕಾವತಿ ಬಿ) ಹೇಮಾವತಿ

ಸಿ) ಕಾವೇರಿ ಡಿ) ವೃಷಭಾವತಿ

12. 'ಚ್ಯಾಂಪಿಯನ್ ರೀಫ್ಸ್'ಗೆ ನೀವು ಭೇಟಿ ಕೊಡಬೇಕಾದರೆ, ಯಾವ ನಗರಕ್ಕೆ ಹೋಗಬೇಕು?

ಎ) ಕೋಲಾರ ಬಿ) ಮೆಲ್ಬರ್ನ್

ಸಿ) ಕ್ಯಾಲಿಫೋರ್ನಿಯಾ ಡಿ) ಲಕ್ಷದ್ವೀಪ

13. ಪ್ರತಿಷ್ಠಿತ ನೋಬಲ್ ಪ್ರಶಸ್ತಿ ವಿಜೇತರಾದ ಯಾರು ಪ್ರಶಸ್ತಿ ಪಡೆದುಕೊಂಡಾಗಿನಿಂದ ಬೆಂಗಳೂರಿನಲ್ಲೇ ನೆಲೆಸಿ, ತಮ್ಮ ಜೀವಿತವನ್ನು ಬೆಂಗಳೂರಿನಲ್ಲೇ ಕಳೆದರು?

ಎ) ಚಂದ್ರಶೇಖರ ವಿ. ರಾಮನ್

ಬಿ) ಸುಬ್ರಹ್ಮಣ್ಯಂ ಚಂದ್ರಶೇಖರ್

ಸಿ) ರವೀಂದ್ರನಾಥ್ ಟಾಗೋರ್

ಡಿ) ಸರ್ವೇಪಲ್ಲಿ ರಾಧಾಕೃಷ್ಣನ್

14. ಏಷ್ಯಾಖಂಡದ ಮೊದಲ ಜಲವಿದ್ಯುಚ್ಛಕ್ತಿ ಯೋಜನೆ ಯಾವುದು?

ಎ) ಕರ್ನಾಟಕದ ಶಿವನಸಮುದ್ರ

ಬಿ) ಪಂಜಾಬಿನ ಬಾಕ್ರಾನಂಗಲ್

ಸಿ) ಗುಜರಾತಿನ ನರ್ಮದಾ ನದಿ ಕಣಿವೆ

ಡಿ) ತಮಿಳುನಾಡಿನ ಮೊಟ್ಟೂರಿನ ಸ್ಟ್ಯಾನ್ಲಿಕೆರೆ

15. ಟಿಪ್ಪು ಸುಲ್ತಾನನ ಖಡ್ಗವು ಯಾರ ಅಧೀನದಲ್ಲಿದೆ?

ಎ) ಕ್ರಿಸ್ಟೀಸ್

ಬಿ) ಕರ್ನಾಟಕ ಸರ್ಕಾರ

ಸಿ) ಭಾರತ ಸರ್ಕಾರ

ಡಿ) ವಿಜಯ್ ಮಲ್ಯ

16. ಈ ಸರಣಿಯ 10ನೆಯ ಸಂಖ್ಯೆಯನ್ನು ಕಂಡುಹಿಡಿಯಿರಿ : 2,3,5,8, ...............

ಎ) 23 ಬಿ) 38

ಸಿ) 47 ಡಿ) 49

17. ದಿನದ 24 ಗಂಟೆಗಳಲ್ಲಿ, ಒಂದು ಗಂಟೆಯಿಂದ ಪ್ರಾರಂಭಿಸಿ ಗಡಿಯಾರದಲ್ಲಿನ ನಿಮಿಷದ ಮುಳ್ಳು ಎಷ್ಟು ಸಲ ಗಂಟೆಯ ಮುಳ್ಳನ್ನು ದಾಟಿಕೊಂಡು ಸುತ್ತುತ್ತದೆ?

ಎ) 21 ಬಿ) 22

ಸಿ) 23 ಡಿ) 24

18. ಮೊದಲು 'ಕಾಡ್ವಾಡ' ಎಂದು ಹೆಸರಿದ್ದ ಈಗಿನ 'ಕಾರವಾರ'ವು 1950 ರವರೆಗೆ ಮುಂಬೈ ಪ್ರಾಂತಕ್ಕೆ ಸೇರಿತ್ತು. 19ನೆಯ ಶತಮಾನದಲ್ಲಿ ಅದನ್ನು ಮುಂಬೈ ಮತ್ತು ಕೊಲಂಬೊ ನಡುವಣದ ಉನ್ನತಮಟ್ಟದ ಬಂದರು ಎಂದು ಪರಿಗಣಿಸಲಾಗುತ್ತಿತ್ತು. ಆಗಿನ ರಕ್ಷಣಾ ಮಂತ್ರಿಯಾದ ಜಾರ್ಜ್ ಫರ್ನಾಂಡೀಸರು 'ಸೀ ಬರ್ಡ್' ಯೋಜನೆಯನ್ನು 1999ರಲ್ಲಿ ನೌಕಾಪಡೆಯ ನೇತೃತ್ವದಲ್ಲಿ ಪ್ರಯೋಗಿಸಿದರು. ಈ ಯೋಜನೆಯನ್ನು ಮೂಲತಃ ಚಿಂತನೆ ಮಾಡಿದ ನೌಕಾದಳದ ಪ್ರಮುಖರು ಯಾರು?

ಎ) ಆಸ್ಕರ್ ಸ್ಟ್ಯಾನಿಡಾಸನ್

ಬಿ) ವಿಷ್ಣು ಭಗತ್

ಸಿ) ಆರ್.ಹೆಚ್. ತಹಿಲಿಯಾನಿ

ಡಿ) ಆರ್. ಎಲ್. ಪೆರೇರ್

19. ಆಗ್ರಾ ನಗರದಲ್ಲಿ ಕ್ರಿಸ್ತಶಕ 1600 ರಲ್ಲಿ ತಾಜಮಹಲನ್ನು ಕಟ್ಟುತ್ತಿರುವಾಗ, ಕಾವೇರಿ ನದಿಯ ಮೇಲೆ ಕಟ್ಟಿದ ಅಣೆಕಟ್ಟಿನ ಹೆಸರೇನು?

ಎ) ಕೃಷ್ಣರಾಜಸಾಗರ ಅಣೆಕಟ್ಟು

ಬಿ) ಸ್ಟ್ಯಾನ್ಲಿಕೆರೆ

ಸಿ) ಕಲ್ಲನ್ನೈ ಅಣೆಕಟ್ಟು

ಡಿ) ಮೆಟ್ಟೂರು ಅಣೆಕಟ್ಟು

20. ಹಂಪೆ ಮತ್ತು ರಾಮಾಯಣಕ್ಕಿರುವ ಸಂಬಂಧವೇನು?

ಎ) ಶ್ರೀರಾಮನು ಹಂಪೆಗೆ ಭೇಟಿಕೊಟ್ಟಿದ್ದನು

ಬಿ) ವಿಜಯನಗರ ಸಾಮ್ರಾಜ್ಯದ ಮೂಲದೈವವೇ ಶ್ರೀರಾಮ

ಸಿ) ವಾನರ ಸಾಮ್ರಾಜ್ಯವಾದ ಕಿಷ್ಕಿಂಧೆಯನ್ನು ಹಂಪೆಗೆ ಗುರುತಿಸಲಾಗುತ್ತದೆ

ಡಿ) ಶ್ರೀರಾಮನು ತುಂಗಭದ್ರಾ ನದಿಯಲ್ಲಿ ಐತಿಹಾಸಿಕವಾದ ದೋಣಿವಿಹಾರ ಮಾಡಿದನು

21. ಒಂದು ಸಮತಲದ ಮೇಲೆ ನೂರು ಚುಕ್ಕಿಗಳನ್ನು ಗರಿಷ್ಠ ಎಷ್ಟು ರೇಖೆಗಳಿಂದ ಕೂಡಿಸಬಹುದು/ ಸೇರಿಸಬಹುದು?

ಎ) 2445 ಬಿ) 4950

ಸಿ) 99 ಡಿ) 1000

22. ರಾಹುಲನು ಒಂದನೇ ಪೆಟ್ಟಿಗೆಯ ಮೇಲೆ ಒಂದು ಚುಕ್ಕಿಯನ್ನಿಟ್ಟನು, ಎರಡನೆಯ ಪೆಟ್ಟಿಗೆಯ ಮೇಲೆ ಎರಡು ಚುಕ್ಕಿಗಳನ್ನಿಟ್ಟನು, ಮೂರನೆಯ ಪೆಟ್ಟಿಗೆಯ ಮೇಲೆ ನಾಲ್ಕು ಚುಕ್ಕಿಗಳನ್ನಿಟ್ಟನು ಮತ್ತು ಇತ್ಯಾದಿ, ಎಂಟನೆಯ ಪೆಟ್ಟಿಗೆಯ ಮೇಲೆ ಎಷ್ಟು ಚುಕ್ಕಿಗಳನ್ನಿಡಬೇಕು?

ಎ) 72 ಬಿ) 128

ಸಿ) 96 ಡಿ) 136

23. ಪುರಿಯಲ್ಲಿರುವ ಜಗನ್ನಾಥ ದೇವಾಲಯದ ಸುತ್ತಮುತ್ತ ನೆಲೆಸಿರುವ ಜನರು ಯಾವ ಭಾಷೆಯನ್ನು ಮಾತನಾಡುತ್ತಾರೆ?

ಎ) ಅಸ್ಸಾಮೀಸ್ ಬಿ) ಮೈಥಿಲಿ

ಸಿ) ಒರಿಯ ಡಿ) ಬೆಂಗಾಲಿ

24. ಆಕಾಶವಾಣಿಯ (ರೇಡಿಯೋ ಸಂಪರ್ಕದ) ಜಗತ್ತಿನಲ್ಲಿ, 'ಎ' ಅಂದರೆ ಆಲ್ಫಾ ಎಂದಾದರೆ, 'ಬಿ'ಗೆ ಸಲ್ಲುವ ಪದ ಯಾವುದು?

ಎ) ಬೀಟಾ ಬಿ) ಬ್ರೇವೂ

ಸಿ) ಬರ್ಲಿನ್ ಡಿ) ಬ್ರಾಡ್ ಕಾಸ್ಟ್

25. ಯಾವ ವೈದ್ಯಕೀಯ ಪದ್ಧತಿಯು ''ಲೆಟ್ ಲೈಕ್ ಕ್ಯೂರೆ ಲೈಕ್'' ಎಂಬ ತರ್ಕಶಾಸ್ತ್ರದ ಮೇಲೆ ಆಧಾರಿತವಾಗಿದೆ?

ಎ) ಆಲೋಪಥಿ ಬಿ) ಆಕ್ಯುಪಂಕ್ಚರ್

ಸಿ) ಹೋಮಿಯೋಪಥಿ ಡಿ) ಆಯುರ್ವೇದ

26. ಗುಪ್ತ ಭಾಷೆಯಲ್ಲಿ 'SOUTHERN ಅನ್ನು 'URWWJHTQ' ಎಂದು ಬರೆದರೆ, 'MARIGOLD' ಅನು ಹೇಗೆ ಬರೆಯಬಹುದು?

ಎ) ODTLIRNG ಬಿ) OESLJRMG

ಸಿ) OETLIRMG ಡಿ) ODTLISMG

27. ಒಂದು ಶಿಬಿರದಲ್ಲಿ 95 ಜನರಿಗೆ 200 ದಿನಗಳಿಗಾಗುವಷ್ಟು ದವಸಧಾನ್ಯಗಳಿದ್ದವು. ಐದು ದಿನಗಳ ನಂತರ 30 ಜನರು ಶಿಬಿರವನ್ನು ಬಿಟ್ಟು ಹೊರಟುಹೋದರು. ಈಗುಳಿದ ಆಹಾರ ಎಷ್ಟು ದಿನಗಳಿಗೆ ಸಾಕಾಗುತ್ತದೆ?

ಎ) 180 ದಿನಗಳು ಬಿ) 285 ದಿನಗಳು

ಸಿ) 126 ದಿನಗಳು ಡಿ) 275 ದಿನಗಳು

28. ಬ್ಯಾಟರಿಗಳಲ್ಲಿ ಯಾವ ರೀತಿ ಶಕ್ತಿ ಉತ್ಪನ್ನವಾಗುತ್ತದೆ?

ಎ) ಅಲ್ಟರ್ ನೇಟಿಂಗ್ ಕರೆಂಟ್ (ಪರ್ಯಾಯ ಶಕ್ತಿ)

ಬಿ) ಡೈರೆಕ್ಟ್ ಕರೆಂಟ್ (ನೇರ ಪ್ರವಾಹ ಶಕ್ತಿ)

ಸಿ) ಕೈನೆಟಿಕ್ ಪವರ್

ಡಿ) ಹೈಡ್ರಾಲಿಕ್ ಪವರ್

29. ನಕ್ಷೆಯಲ್ಲಿ 6.6 ಕಿ.ಮೀ. ದೂರವನ್ನು 0.5 ಸೆಂ.ಮೀ.ಗಳಲ್ಲಿ ತೋರಿಸಲಾಗುತ್ತದೆ. ನಕ್ಷೆಯ ಮೇಲೆ ಎರಡು ಸ್ಥಳಗಳ ನಡುವಿನ ದೂರವನ್ನು 40 ಸೆಂ.ಮೀ. ಗಳೆಂದು ತೋರಿಸಲಾದರೆ, ಈ ಸ್ಥಳಗಳ ನಡುವೆ ನಿಜವಾದ ದೂರ ಎಷ್ಟು ಕಿ.ಮೀ. ಗಳಷ್ಟು ಇರಬಹುದು ?

ಎ) 478 ಬಿ) 560

ಸಿ) 528 ಡಿ) 540

30. X : Y = 5 :4 ಮತ್ತು Y: Z=8 : 15 ಆದಲ್ಲಿ, X: Y : Z= ?

ಎ) 10 : 8 :15 ಬಿ) 12 : 6 : 15

ಸಿ) 8 : 6 : 12 ಡಿ) 8 : 6 : 15

31. ಭಾರತದ ಸುಪ್ರೀಮ್ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಯಾರು? (2009ರಲ್ಲಿ ಈ ಪರೀಕ್ಷೆ ನಡೆದಾಗ)

ಎ) ಜಸ್ಟಿಸ್ ರಾಜೇಂದ್ರ ಬಾಬು

ಬಿ) ಜಸ್ಟಿಸ್ ವಿ.ಎನ್. ಖರೆ

ಸಿ) ಜಸ್ಟಿಸ್ ಆರ್.ಸಿ. ಲಹೋಟಿ

ಡಿ) ಜಸ್ಟಿಸ್ ಕೆ.ಜಿ. ಬಾಲಕೃಷ್ಣನ್

32. ಇಲ್ಲಿರುವ ಯಾವ ದೇಶಕ್ಕೆ ಕಾಮನ್ ವೆಲ್ತ್‌ಗೆ ಪುನಃ ಪ್ರವೇಶ ದೊರೆಯಿತು?

ಎ) ನೇಪಾಳ ಬಿ) ಮಯನ್ಮಾರ್

ಸಿ) ಪಾಕಿಸ್ತಾನ ಡಿ) ಬಾಂಗ್ಲಾದೇಶ

33. ಲಾಲ್‌ಬಾಗ್ ಉದ್ಯಾನ ವನದಲ್ಲಿ ಬಹಳಷ್ಟು ದೊಡ್ಡ ದೊಡ್ಡ ಮರಗಳಿವೆ. ಮರದ ವಯಸ್ಸನ್ನು ಹೇಗೆ ಕಂಡುಹಿಡಿಯುವಿರಿ?

ಎ) ಎತ್ತರವನ್ನು ಅಳೆಯುವುದರಿಂದ

ಬಿ) ಅಡ್ಡಳತೆಯನ್ನು ಅಳೆಯುವುದರಿಂದ

ಸಿ) ಮರದ ಸತ್ವವನ್ನು ವಿಶ್ಲೇಷಿಸುವುದರಿಂದ

ಡಿ) ಮರದ ರೆಂಬೆಯೊಳಗಿನ ವಾರ್ಷಿಕ ವರ್ತುಗಳನ್ನು ಎಣಿಸುವುದರಿಂದ

34. ಮಂಜಿನಲ್ಲಿ ಚಿಕ್ಕಚಿಕ್ಕ ನೀರಿನ ಹನಿಗಳಿದ್ದರೂ, ಅದು ಕಾಣಿಸುವುದಿಲ್ಲ. ಏಕೆಂದರೆ

ಎ) ನೀರಿನ ಹನಿಗಳೊಳಗೆ ಬೆಳಕಿನ ಕಿರಣಗಳು ಪ್ರತಿಬಿಂಬಿಸುವುದರಿಂದ

ಬಿ) ಬೆಳಕಿನ ಕಣಗಳು ಮಂಜಿನಲ್ಲಿರುವ ನೀರಿನ ಹನಿಗಳೊಳಗೆ ತುಂಬಿಕೊಳ್ಳುವುದರಿಂದ

ಸಿ) ಬೆಳಕಿನಿಂದ ಹನಿಗಳು ಮಬ್ಬಾಗುವುದರಿಂದ

ಡಿ) ನೀರಿನ ಹನಿಗಳಿಂದಲೇ ಬಹಳಷ್ಟು ಬೆಳಕು ಚೆದುರುವುದರಿಂದ

35. ಹಿಮಾಲಯದ ಈ ಯಾವ ಪರ್ವತ ಶೃಂಗವು ಭಾರತದಲ್ಲಿಲ್ಲ?

ಎ) ಅನ್ನಪೂರ್ಣ

ಬಿ) ನಂದಾ ದೇವಿ

ಸಿ) ಮೌಂಟ್ ಕ್ಯಾಮೆಟ್

ಡಿ) ಕಾಂಚನ್ ಜುಂಗಾ

36. ಭಾರತದಲ್ಲಿ ರಾಷ್ಟ್ರಪತಿಯು ತುರ್ತುಪರಿಸ್ಥಿತಿಯನ್ನು ಪ್ರಕಟಿಸಿದಾಗ, ಪಾರ್ಲಿಮೆಂಟ್ ಸಭೆಯಲ್ಲಿ ಅನುಮೋದಿಸಿದ ಹೊರತು, ಅದು ಈ ಅವಧಿಯಲ್ಲಿ ಜಾರಿಯಲ್ಲಿರುತ್ತದೆ?

ಎ) ಒಂದು ತಿಂಗಳು ಬಿ) ಆರು ತಿಂಗಳು

ಸಿ) ಒಂದು ವರ್ಷ ಡಿ) ಅನಿಶ್ಚಿತವಾಗಿ

37. ಭಾರತ ಸೇನೆಯ ಪ್ರಮುಖರಿಗೆ ಮಾತ್ರ ಕೊಡಲಾಗುವ ಅಪರೂಪದ ಗೌರವವಾದ 'ಫೀಲ್ಡ್ ಮಾರ್ಷಲ್' ಎಂಬ ಬಿರುದನ್ನು ಸ್ಯಾಮ್ ಮಾನಿಕ್ ಷಾರಿಗೆ ಕೊಡಲಾಯಿತು. ಈ ಬಿರುದನ್ನು ಪಡೆದುಕೊಂಡ ಇನ್ನೊಬ್ಬರು

ಎ) ಕೊಡದೇರ ಮಾದಪ್ಪ ಕರಿಯಪ್ಪ

ಬಿ) ಕೊಡಂದೇರ ಸುಬ್ಬಯ್ಯ ತಿಮ್ಮಯ್ಯ

ಸಿ) ಎ.ಎಸ್. ವೈದ್ಯ

ಡಿ) ವೇದ್ ಪ್ರಕಾಶ್ ಮಾಲಿಕ್

38. ಇವುಗಳಲ್ಲಿ ಯಾವುದನ್ನು ಸರಿಯಾಗಿ ಹೊಂದಿಸಲಾಗಿಲ್ಲ?

ಎ) NH2 : ದಿಲ್ಲಿ – ಕಲ್ಕತ್ತಾ

ಬಿ) NH4 : ಚೆನ್ನೈ – ಥಾನೆ

ಸಿ) NH3 : ಆಗ್ರಾ – ಮುಂಬೈ

ಡಿ) NH9: ದಿಲ್ಲಿ –ಮುಂಬೈ

39. ಒಂದು ಲೀಟರ್ ಹಾಲಿನ ಬೆಲೆ 12 ರೂ.ಗಳು ಅದಕ್ಕೆ ಎಷ್ಟರ ಪ್ರಮಾಣದಲ್ಲಿ ನೀರನ್ನು ಬೆರೆಸಿದರೆ ಹಾಲಿನ ಬೆಲೆ 8 ರೂ. ಗಳಾಗುತ್ತವೆ?

ಎ) 1 ಹಾಲು : 4 ನೀರು ಬಿ) 2 ಹಾಲು : 1 ನೀರು

ಸಿ) 2 ಹಾಲು : 3 ನೀರು ಡಿ) ಇದ್ಯಾವುದೂ ಅಲ್ಲ

40. ಎರಡು ಅಂಕಿಗಳ ಸಂಖ್ಯೆಯು ಹೇಗಿದೆಯೆಂದರೆ, ಅದರ ಗುಣಲಬ್ದವು 8 ಮತ್ತು ಅದಕ್ಕೆ 18 ನ್ನು ಕೂಡಿಸಿದಾಗ, ಆ ಸಂಖ್ಯೆಯು ತಿರುಗುಮುರುಗಾಗುತ್ತದೆ. ಆ ಸಂಖ್ಯೆ ಯಾವುದೆಂದರೆ?

ಎ) 18 ಬಿ) 42

ಸಿ) 81 ಡಿ) 24

41. ಮೊಲವು 5 ಸಲ ಜಿಗಿದರೆ ನಾಯಿಯು ನಾಲ್ಕು ಸಲ ಜಿಗಿಯುತ್ತದೆ. ಆದರೆ ನಾಯಿಯ 3 ಜಿಗಿತಗಳು ಮೊಲದ ನಾಲ್ಕು ಜಿಗಿತಗಳಿಗೆ ಸಮ. ವೇಗದ ಪ್ರಮಾಣ ಹಾಗಿದ್ದಲ್ಲಿ, ಅವುಗಳ ವೇಗಗಳನ್ನು ಹೋಲಿಸಿ ನೋಡಿ?

ಎ) ನಾಯಿಯ ವೇಗ : ಮೊಲದ ವೇಗ = 15 :16

ಬಿ) ನಾಯಿಯ ವೇಗ : ಮೊಲದ ವೇಗ = 16 :15

ಸಿ) ನಾಯಿಯ ವೇಗ : ಮೊಲದ ವೇಗ = 3 :5

ಡಿ) ನಾಯಿಯ ವೇಗ : ಮೊಲದ ವೇಗ = 5 :3

42. ಸೇಬನ್ನು ಕಿತ್ತಳೆಯೆಂದು ಕರೆದರೆ, ಕಿತ್ತಳೆಯನ್ನು ಪೀಚ್ ಎಂದು ಕರೆದರೆ, ಪೀಚನ್ನು ಆಲೂಗಡ್ಡೆಯೆಂದರೆ, ಆಲೂಗಡ್ಡೆಯನ್ನು ಬಾಳೆಹಣ್ಣೆಂದರೆ, ಬಾಳೆಹಣ್ಣನ್ನು ಪರಂಗಿ ಹಣ್ಣೆಂದರೆ, ಪರಂಗಿ ಹಣ್ಣನ್ನು ಚೇಪೆಹಣ್ಣೆಂದು ಕರೆದರೆ, ಯಾವುದು ಭೂಮಿಯ ಕೆಳಗೆ ಬೆಳೆಯುತ್ತದೆ?

ಎ) ಆಲೂಗೆಡ್ಡೆ ಬಿ) ಚೇಪೆಹಣ್ಣು

ಸಿ) ಸೇಬು ಡಿ) ಬಾಳೆಹಣ್ಣು

43. ರಮಾ ಮತ್ತು ರಾಧಾ ಎರಡು ಬೇರೆ ಬೇರೆ ಮಾರಾಟಮೇಳಗಳಿಗೆ ಹೋಗುತ್ತಾರೆ. ಇಬ್ಬರೂ 2000 ರೂ.ಗಳಿಗೆ ಬೆಲೆಬಾಳುವ ವಸ್ತ್ರಗಳನ್ನು ಖರೀದಿಸುತ್ತಾರೆ. ರಾಧಾಳಿಗೆ 50% ರಷ್ಟು ವ್ಯಾಪಾರಿಯ ರಿಯಾಯಿತಿ ಸಿಗುತ್ತದೆ. ರಮಾಳಿಗೆ. 30% ರಷ್ಟು ಸರ್ಕಾರದ ರಿಯಾಯಿತಿ ಮೊದಲು ಸಿಗುತ್ತದೆ. ನಂತರ 25% ರಿಯಾಯಿತಿ ಕ್ರೆಡಿಟ್ ಕಾರ್ಡಿನ ವತಿಯಿಂದ ಸಿಗುತ್ತದೆ. ಹಾಗಿದ್ದಲ್ಲಿ ಇದರಲ್ಲಿ ಯಾವುದು ಸತ್ಯ ?

ಎ) ರಾಧಾಳಿಗಿಂತ ರಮಾಳು ಹೆಚ್ಚು ಹಣ ತೆತ್ತಳು

ಬಿ) ರಮಾಳಿಗಿಂತ ರಾಧಾಳು ಹೆಚ್ಚು ಹಣ ತೆತ್ತಳು

ಸಿ) ಇಬ್ಬರೂ ಸಮನಾಗಿ ಖರ್ಚುಮಾಡಿದ್ದಾರೆ

ಡಿ) ಪ್ರಶ್ನೆ ನಿಗೂಢವಾಗಿದೆ

44. ನಮ್ಮ ತಾಯಿಯವರು ಬ್ಯಾಂಕಿನಲ್ಲಿ 2000ರೂ.ಗಳ ಫಿಕ್ಸೆಡ್ ಡಿಪಾಸಿಟ್ ಇಟ್ಟಿದ್ದಾರೆ. 6 ವರ್ಷಗಳ ನಂತರ 4000 ರೂ.ಗಳು ದೊರೆಯುವುದೆಂದು ಅಲ್ಲಿನ ಮ್ಯಾನೇಜರು ತಾಯಿಗೆ ಹೇಳಿದ್ದಾರೆ. ಹಾಗಾದರೆ, ಫಿಕ್ಸೆಡ್ ಡಿಪಾಸಿಟ್‌ನ ಬಡ್ಡಿ ದರವೆಷ್ಟು?

ಎ) 16.16% ಬಿ) 16.36%

ಸಿ) 16.66% ಡಿ) 16.56%

45. 'ಕೈನೆಟೋಸಿಸ್' ಎಂಬ ಕಾಯಿಲೆ ಬಂದರೆ, ಜನರು ಯಾವ ರೀತಿಯಾದ ಪ್ರಯಾಣ ಮಾಡುತ್ತಾರೆ?

ಎ) ವಿಮಾನದಲ್ಲಿ ಬಿ) ಹಡಗಿನಲ್ಲಿ

ಸಿ) ಕಾರಿನಲ್ಲಿ ಡಿ) ಸೈಕಲಿನಲ್ಲಿ

46. ಚಲಿಸುತ್ತಿರುವ ವಾಹನಗಳನ್ನು ನಿಲ್ಲಿಸಲು ಉಪಯೋಗಿಸುವ ಒತ್ತಡವನ್ನು

ಎ) ಫ್ರಿಕ್ಶನ್ ಎನ್ನುತ್ತಾರೆ ಬಿ) ಗ್ರ್ಯಾವಿಟಿ ಎನ್ನುತ್ತಾರೆ

ಸಿ) ಟಾರ್ಕ್ ಎನ್ನುತ್ತಾರೆ ಡಿ) ಇದ್ಯಾವುದೂ ಅಲ್ಲ

47. ಒಬ್ಬ ಹಣ್ಣಿನ ವ್ಯಾಪಾರಿ 12 ದಿನಗಳಲ್ಲಿ 504 ರೂ.ಗಳನ್ನು ಸಂಪಾದಿಸಿದನು. ಮೊದಲ ನಾಲ್ಕು ದಿನಗಳಲ್ಲಿ ಅವನ ಸರಾಸರಿ ಸಂಪಾದನೆ ಒಂದು ದಿನಕ್ಕೆ 40 ರೂ.ಗಳಂತಿತ್ತು ಹಾಗಿದ್ದಲ್ಲಿ, ಬಾಕಿಯ ದಿನಗಳಲ್ಲಿ ಅವನ ಸರಾಸರಿ ಸಂಪಾದನೆಯನ್ನು ಲೆಕ್ಕ ಹಾಕಿ

ಎ) 40 ರೂ.ಗಳು ಬಿ) 43 ರೂ.ಗಳು

ಸಿ) 45 ರೂ.ಗಳು ಡಿ) 42 ರೂ.ಗಳು